# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 388

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 13.08.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸರ್ಕಾರಿ ಬಸ್ ನಿಗಮಗಳಿಗೆ ರಾಜ್ಯ ಸರ್ಕಾರದಿಂದ ಕಳೆದ 2 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಎಷ್ಟು; (ನಿಗಮವಾರು ವಿವರ ನೀಡುವುದು) | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿದೆ:- (ರೂ.ಕೋಟಿಗಳಲ್ಲಿ) |

| ಸಂಸ್ಥೆ/ನಿಗಮ | ಬಿಡುಗಡೆಯಾದ ಅನುದಾನ | |
|---|---|---|
| | 2023-34 | 2024-25 |
| ಕ.ರಾ.ರ.ಸಾ.ನಿಗಮ | 1602.20 | 2503.69 |
| ಬೆಂ.ಮ.ಸಾ.ಸಂಸ್ಥೆ | 1227.33 | 1522.72 |
| ವಾ.ಕ.ರ.ಸಾ.ಸಂಸ್ಥೆ | 1214.93 | 1694.07 |
| ಕ.ಕ.ರ.ಸಾ.ನಿಗಮ | 882.29 | 1174.67 |
| **ಒಟ್ಟು** | **4926.75** | **6895.15** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ. | ರಾಜ್ಯದಲ್ಲಿ ನಿಗಮಗಳಿಗೆ ಅಂಗಡಿ, ಹೋಟೆಲ್ ಇನ್ನಿತರ ಹೊರ ಆದಾಯ ಎಷ್ಟು; (ವಿಭಾಗಗಳಾಗಿ ನೀಡುವುದು) | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್ ನಿಲ್ದಾಣಗಳು/ ಘಟಕಗಳಲ್ಲಿನ ವಾಣಿಜ್ಯ ಮಳಿಗೆಗಳು/ ವ್ಯವಹಾರಗಳು, ಜಾಹೀರಾತು ಪ್ರದರ್ಶನ ಮತ್ತು ಮಾರ್ಗ ಬದಿಯ ಫಲಹಾರ ಮಂದಿರಗಳಿಂದ 2024-25ನೇ ಸಾಲಿನಲ್ಲಿ ಗಳಿಸಿರುವ ಆದಾಯದ ವಿವರ ಕೆಳಕಂಡಂತಿದೆ:- (ರೂ.ಲಕ್ಷಗಳಲ್ಲಿ) |

| ಸಂಸ್ಥೆ/ನಿಗಮ | ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 7837.44 |
| ಬೆಂ.ಮ.ಸಾ.ಸಂಸ್ಥೆ | 13845.58 |
| ವಾ.ಕ.ರ.ಸಾ.ಸಂಸ್ಥೆ | 7136.14 |
| ಕ.ಕ.ರ.ಸಾ.ನಿಗಮ (ಸರಾಸರಿ) | 3940.56 |
| **ಒಟ್ಟು** | **32759.72** |

ವಿಭಾಗವಾರು ವಿವರವನ್ನು **ಅನುಬಂಧ-'ಅ'**ರಲ್ಲಿ ನೀಡಲಾಗಿದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ. | ರಾಜ್ಯದ ಎಲ್ಲಾ ನಿಗಮಗಳಲ್ಲಿ ಖಾಸಗಿ ಚಾಲಕರನ್ನು ಹೊರಗುತ್ತಿಗೆ | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ನೇ ಸಾಲಿನ ಪೂರ್ವದ 07 ವರ್ಷಗಳಿಂದ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ |

| | |
|---|---|
| ಆಧಾರದ ಮೇಲೆ ನೇಮಕ ಮಾಡಲಾಗುತ್ತಿದೆಯೇ; ಮಾಡಿದ್ದಲ್ಲಿ, ಅವರಿಗೆ ಎಷ್ಟು ದಿನಗಳ ತರಬೇತಿ ನೀಡಲಾಗುತ್ತಿದೆ; (ವಿಭಾಗಗಳ ಸಂಪೂರ್ಣ ಮಾಹಿತಿ ನೀಡುವುದು) | ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ 2023-24ನೇ ಸಾಲಿನ ಪೂರ್ವದ ನಾಲ್ಕು ವರ್ಷಗಳಲ್ಲಿ ಯಾವುದೇ ನೇಮಕಾತಿಯಾಗಿರುವುದಿಲ್ಲ. ಈ ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ದೊರಕಿಸುವ ನಿಟ್ಟಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಏಜೆನ್ಸಿಯವರಿಂದ ಅಗತ್ಯವಿರುವ ಖಾಸಗಿ ಚಾಲಕರನ್ನು ನಿಯಮಾನುಸಾರ ನಿಯೋಜಿಸಿಕೊಳ್ಳಲಾಗುತ್ತಿದೆ. ನಿಗಮವಾರು ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಚಾಲಕರು ವಿವರ ಕೆಳಕಂಡಂತಿದೆ:- |

| ನಿಗಮ | **ಹೊರ ಗುತ್ತಿಗೆ ಚಾಲಕರ ಸಂಖ್ಯೆ** |
|---|---|
| ಕ.ರಾ.ರ.ಸಾ.ನಿಗಮ | 1898 |
| ಬೆಂ.ಮ.ಸಾ.ಸಂಸ್ಥೆ | - |
| ವಾ.ಕ.ರ.ಸಾ.ಸಂಸ್ಥೆ | 811 |
| ಕ.ಕ.ರ.ಸಾ.ನಿಗಮ | 973 |
| **ಒಟ್ಟು** | **3682** |

ಆದರೆ ಪ್ರಸ್ತುತ ಜುಲೈ-2025ರ ಅಂತ್ಯಕ್ಕೆ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಚಾಲನಾ ಸಿಬ್ಬಂದಿಗಳನ್ನು ನೇಮಿಸಿಕೊಂಡಿದ್ದು ವಿವರ ಕೆಳಕಂಡಂತಿದೆ:-

| **ನಿಗಮ** | **ಚಾಲನಾ ಸಿಬ್ಬಂದಿಗಳ ಸಂಖ್ಯೆ** |
|---|---|
| ಕ.ರಾ.ರ.ಸಾ.ನಿಗಮ | 2000 |
| ಬೆಂ.ಮ.ಸಾ.ಸಂಸ್ಥೆ | 2518 |
| ವಾ.ಕ.ರ.ಸಾ.ಸಂಸ್ಥೆ | 1026 |
| ಕ.ಕ.ರ.ಸಾ.ನಿಗಮ | 1619 |
| **ಒಟ್ಟು** | **7163** |

**ಕ.ರಾ.ರ.ಸಾ.ನಿಗಮ:-**

ನಿಗಮದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಏಜೆನ್ಸಿಯವರಿಂದ ಖಾಸಗಿ ಚಾಲಕರನ್ನು ನಿಯಮಾನುಸಾರ ನಿಯೋಜಿಸಿಕೊಳ್ಳಲಾಗುತ್ತಿದೆ. ಹೊರಗುತ್ತಿಗೆ ಚಾಲಕರಿಗೆ ಚಾಲನಾ ಅರ್ಹತಾ ಪರೀಕ್ಷೆ ನಡೆಸಿ, ಉತ್ತೀರ್ಣರಾದವರಿಗೆ ನಿಗಮದ ಬಗ್ಗೆ/ಚಾಲಕರ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ತಿಳುವಳಿಕೆ ನೀಡಿದ ನಂತರ ನಿಯೋಜಿಸಿಕೊಳ್ಳಲಾಗುತ್ತಿದೆ.

**ವಿಭಾಗವಾರು ಮಾಹಿತಿ ಕೆಳಕಂಡಂತಿದೆ:-**

| **ಕ್ರ. ಸಂ** | **ವಿಭಾಗ** | **ಚಾಲಕರ ಸಂಖ್ಯೆ** |
|---|---|---|
| 1 | ಚಿಕ್ಕಬಳ್ಳಾಪುರ | 159 |
| 2 | ಚಿತ್ರದುರ್ಗಾ | 49 |
| 3 | ಚಿಕ್ಕಮಗಳೂರು | 96 |
| 4 | ಚಾಮರಾಜನಗರ | 189 |
| 5 | ದಾವಣಗೆರೆ | 47 |
| 6 | ಕೋಲಾರ | 99 |
| 7 | ಮಂಗಳೂರು | 142 |

| | | |
|---|---|---|
| 8 | ಮೈಸೂರು (ಗ್ರಾ) | 178 |
| 9 | ಮೈಸೂರು (ನ) | 254 |
| 10 | ಮಂಡ್ಯ | 88 |
| 11 | ಪುತ್ತೂರು | 200 |
| 12 | ಬೆಂಗಳೂರು (ದ) | 161 |
| 13 | ತುಮಕೂರು | 140 |
| 14 | ಶಿವಮೊಗ್ಗ | 96 |
| | ಒಟ್ಟು | **1898** |

**ವಾ.ಕ.ರ.ಸಾ.ಸಂಸ್ಥೆ:-** ಸದರಿ ಚಾಲಕರನ್ನು ನೇಮಕ ಮಾಡಿಕೊಳ್ಳುವಾಗ ಸಂಸ್ಥೆಯಲ್ಲಿ ಪರಿಣಿತಿ ಹೊಂದಿದ ತಾಂತ್ರಿಕ ಅಧಿಕಾರಿಗಳಿಂದ ಚಾಲನಾ ಪರೀಕ್ಷೆಗೆ ಒಳಪಡಿಸಿ, ನೇಮಕ ಮಾಡಿಕೊಳ್ಳಲಾಗಿದೆ. ಸದರಿ ಚಾಲಕರುಗಳಿಗೆ ಪ್ರತ್ಯೇಕವಾಗಿ ಯಾವುದೇ ತರಬೇತಿಯನ್ನು ನೀಡಿರುವುದಿಲ್ಲ. ಆದರೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿದ ಭಾರಿ ವಾಹನ ಚಾಲನಾ ಪರವಾನಿಗೆ ಹಾಗೂ ಬ್ಯಾಡ್ಜ್ ಹೊಂದಿರುವುದನ್ನು ಕಡ್ಡಾಯವಾಗಿ ಪರಿಶೀಲಿಸುವುದರೊಂದಿಗೆ ಅವಶ್ಯಕ ದಾಖಲಾತಿಗಳನ್ನು ಪರಿಶೀಲಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ.

**ವಿಭಾಗವಾರು ಮಾಹಿತಿ ಕೆಳಕಂಡಂತಿದೆ:-**

| **ಕ್ರ. ಸಂ.** | **ವಿಭಾಗ** | **ಚಾಲಕರ ಸಂಖ್ಯೆ** |
|---|---|---|
| 1 | ಬೆಳಗಾವಿ | 64 |
| 2 | ಚಿಕ್ಕೋಡಿ | 175 |
| 3 | ಗದಗ | 40 |
| 4 | ಉತ್ತರ ಕನ್ನಡ | 170 |
| 5 | ಧಾರವಾಡ ಗ್ರಾ | 110 |
| 6 | ಹಾವೇರಿ | 165 |
| 7 | ಹುಬ್ಬಳ್ಳಿ ಗ್ರಾ | 37 |
| 8 | ಹು-ಧಾ ನ. ಸಾರಿಗೆ | 50 |
| ಒಟ್ಟು | | **811** |

**ಕ.ಕ.ರ.ಸಾ.ನಿಗಮ:** ನಿಗಮದಲ್ಲಿ ಚಾಲನಾ ಸಿಬ್ಬಂದಿಗಳ ಕೊರತೆ ಇರುವುದರಿಂದ, ಖಾಸಗಿ ಚಾಲಕರನ್ನು ಅವರ ಚಾಲನಾ ವೃತ್ತಿ ಕೌಶಲ್ಯ ಪರೀಕ್ಷೆಯನ್ನು ಕೈಗೊಂಡು, ಅದರಲ್ಲಿ ಅರ್ಹರಾದವರನ್ನು ಹೊರಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಮಾತ್ರ ನಿಯೋಜಿಸಿಕೊಳ್ಳಲಾಗುತ್ತಿದೆ.

**ವಿಭಾಗವಾರು ಮಾಹಿತಿ ಕೆಳಕಂಡಂತಿದೆ:-**

| **ಕ್ರ. ಸಂ.** | **ವಿಭಾಗ** | **ಚಾಲಕರ ಸಂಖ್ಯೆ** |
|---|---|---|
| 1 | ಕಲಬುರಗಿ-1 | 150 |
| 2 | ಕಲಬುರಗಿ-2 | 140 |

| | | |
|---|---|---|
| 3 | ರಾಯಚೂರು | 81 |
| 4 | ಕೊಪ್ಪಳ | 96 |
| 5 | ಯಾದಗಿರಿ | 106 |
| 6 | ಬಳ್ಳಾರಿ | 82 |
| 7 | ಹೊಸಪೇಟೆ | 123 |
| 8 | ವಿಜಯಪುರ | 125 |
| 9 | ಬೀದರ | 70 |
| ಒಟ್ಟು | | **973** |

ಈ ರಾಜ್ಯದ ಎಲ್ಲಾ ನಿಗಮದ ಡಿಪೋ ಅಥವಾ ವಿಭಾಗದ ಅಧಿಕಾರಿಗಳು ಚಾಲಕ ಮತ್ತು ನಿರ್ವಾಹಕರಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಮೇಲಾಧಿಕಾರಿಗಳಿಗೆ ದೂರು ನೀಡಿರುವ ಪ್ರಕರಣಗಳು ಎಷ್ಟು ಮತ್ತು ಅದರಂತೆ ಕಾನೂನು ರೀತಿ ಕ್ರಮ ಕೈಗೊಂಡ ಪ್ರಕರಣಗಳು ಎಷ್ಟು; ಚಾಲಕ ಮತ್ತು ನಿರ್ವಾಹಕರು ಆತ್ಮಹತ್ಯೆಗೆ ಯತ್ನಿಸಿರುವ ಪ್ರಕರಣಗಳು ಎಷ್ಟು; (ಸಂಪೂರ್ಣ ಜಿಲ್ಲಾವಾರು ಮಾಹಿತಿ ನೀಡುವುದು)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಕಳೆದ 02 ವರ್ಷಗಳಲ್ಲಿ ಡಿಪೋ ಅಥವಾ ವಿಭಾಗದ ಅಧಿಕಾರಿಗಳು ಚಾಲಕ ಮತ್ತು ನಿರ್ವಾಹಕರಿಗೆ ತೊಂದರೆ, ಮಾನಸಿಕ ಕಿರುಕುಳ ನೀಡುತ್ತಿದ್ದಾರೆಂದು ಮೇಲಾಧಿಕಾರಿಗಳಿಗೆ ದೂರು ನೀಡಿರುವ ಹಾಗೂ ಚಾಲಕ ಮತ್ತು ನಿರ್ವಾಹಕರು ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣಗಳ ವಿವರಗಳು ಕೆಳಗಿನಂತಿದ್ದು, ಸಂಪೂರ್ಣ ಮಾಹಿತಿಯನ್ನು **ಅನುಬಂಧ-'ಆ'**ರಲ್ಲಿ ನೀಡಲಾಗಿದೆ.

| ಸಂಸ್ಥೆ/ ನಿಗಮ | ದೂರು ನೀಡಿರುವ ಪ್ರಕರಣಗಳು | ಕಾನೂನು ರೀತಿ ಕ್ರಮ ಕೈಗೊಂಡ ಪ್ರಕರಣಗಳು | ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣಗಳು |
|---|---|---|---|
| ಕ.ರಾ.ರ.ಸಾ.ನಿಗಮ | 04 | 03 (ಉಳಿದ 01 ಪ್ರಕರಣ ಸಾಬೀತಾಗಿರುವುದಿಲ್ಲ) | 06 (03 ಆಡಳಿತಾತ್ಮಕ ಕಾರಣಗಳಿಂದ 03 ಕೌಟುಂಬಿಕ ಕಾರಣಗಳಿಂದ) |
| ಬೆಂ.ಮ.ಸಾ.ಸಂಸ್ಥೆ | 19 | 11 (ಉಳಿದ 08 ಪ್ರಕರಣಗಳು ಸಾಬೀತಾಗಿರುವುದಿಲ್ಲ) | 00 |
| ವಾ.ಕ.ರ.ಸಾ.ಸಂಸ್ಥೆ | 26 | 26 | 00 |
| ಕ.ಕ.ರ.ಸಾ.ನಿಗಮ | 27 | 10 (ಉಳಿದ 17 ಪ್ರಕರಣಗಳು ಸಾಬೀತಾಗಿರುವುದಿಲ್ಲ) | 02 (ಆಡಳಿತಾತ್ಮಕ ಕಾರಣಗಳಿಂದ) |
| ಒಟ್ಟು | **76** | **50** | **8** |

ಉ. ರಾಜ್ಯದಲ್ಲಿ ಸರ್ಕಾರಿ ಬಸ್ ಅಪಘಾತವಾಗುತ್ತಿರುವುದು ಅಥವಾ ಆಕಸ್ಮಿಕ ಬೆಂಕಿ ಕಾಣಿಸುವುದು ಈ ರೀತಿ ಪ್ರಕರಣಗಳಿಗೆ ಸರ್ಕಾರ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ;

ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಅಪಘಾತಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಮತ್ತು ಆಕಸ್ಮಿಕ ಬೆಂಕಿ ಕಾಣಿಸಿದಾಗ ಕೈಗೊಳ್ಳಲಾಗುತ್ತಿರುವ ಕ್ರಮಗಳ ವಿವರಗಳನ್ನು **ಅನುಬಂಧ-'ಇ'**ರಲ್ಲಿ ನೀಡಲಾಗಿದೆ.

ಊ. ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಎಲೆಕ್ಟ್ರಿಕ್ ಬಸ್‌ಗಳನ್ನು ಕರ್ನಾಟಕದ ಯಾವ ಯಾವ ಜಿಲ್ಲೆಗೆ ಹಂಚಿಕೆ ಮಾಡಲಾಗುವುದು

ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು (MoHUA) 'PM-eBus Sewa' ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ. ಭಾರತ ಸರ್ಕಾರವು ಸದರಿ ಇ-ಬಸ್ ಕಾರ್ಯಾಚರಣೆಗೆ MoHUA ಮೂಲಕ CESL (Convergence Energy Services Ltd.,) ರವರು ಒಟ್ಟು

ವೆಚ್ಚದ ಒಪ್ಪಂದ (GCC-wet lease)- ಮಾದರಿಯ ಮೇಲೆ ಕೇಂದ್ರ ಸರ್ಕಾರವೇ ಟೆಂಡರ್ ಪ್ರಕ್ರಿಯೆ ನಡೆಸುತ್ತದೆ.

ಸದರಿ PM e-bus sewa ಯೋಜನೆಯಡಿಯಲ್ಲಿ ಆಯ್ಕೆಯಾದ ಕರ್ನಾಟಕ ರಾಜ್ಯದ 10 ನಗರಗಳಿಗೆ ಒಟ್ಟು 750 ಸಂಖ್ಯೆ ವಿದ್ಯುತ್ ಚಾಲಿತ ಬಸ್ಸುಗಳನ್ನು ಜಿಸಿಸಿ (Gross Cost Contract) ಆಧಾರದ ಮೇಲೆ ಒದಗಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ. ಅದರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 350 ವಿದ್ಯುತ್ ಚಾಲಿತ ಬಸ್‌ಗಳು ಹಂಚಿಕೆಯಾಗಿದ್ದು, ಆ ಪೈಕಿ ತುಮಕೂರು ವಿಭಾಗಕ್ಕೆ 50 ಸಂಖ್ಯೆಯ 12ಮೀಟರ್ ಬಸ್‌ಗಳು ಹಂಚಿಕೆಯಾಗಿರುತ್ತವೆ. ಅದರಂತೆ, ಸದರಿ ಯೋಜನೆಯಡಿ ಟೆಂಡರ್‌ನಲ್ಲಿ L-1ಆಗಿ ಆಯ್ಕೆಯಾಗುವ ಬಿಡ್ಡುದಾರರೇ ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲಕರ ಸೇವೆ, ನಿರ್ವಹಣೆ ಹಾಗೂ ಬಸ್ಸುಗಳನ್ನು ಚಾರ್ಜಿಂಗ್‌ಗೊಳಿಸಲು ತಗಲುವ ವಿದ್ಯುತ್ ವೆಚ್ಚವನ್ನು ಸಹ ಪಾವತಿಸುತ್ತಾರೆ. ಆದರೆ, ಸದರಿ ವಿದ್ಯುತ್ ಚಾಲಿತ ಬಸ್ಸುಗಳಿಗೆ ನಿರ್ವಾಹಕರನ್ನು ಸಾರಿಗೆ ನಿಗಮವು ಒದಗಿಸಬೇಕಾಗುತ್ತದೆ.

ಮುಂದುವರೆದು, ಟೆಂಡರ್‌ನಲ್ಲಿ ಬಿಡ್ಡುದಾರರು Standard ಬಸ್ಸುಗಳಿಗೆ ಸಂಬಂಧಿಸಿದಂತೆ ಬಿಡ್‌ನಲ್ಲಿ ಪ್ರತಿ ಕಿ.ಮೀ.ಗೆ ನಮೂದಿಸುವ ದರದಲ್ಲಿ ಕೇಂದ್ರ ಸರ್ಕಾರವು ಪ್ರತಿ ಕಿ.ಮೀ.ಗೆ ರೂ.24/-ರಷ್ಟು CA (Central Assistance) ಮಾದರಿಯಲ್ಲಿ ನೀಡಲಿದ್ದು ಉಳಿದ ವ್ಯತ್ಯಾಸದ ಮೊತ್ತವನ್ನು ಸಂಬಂಧಪಟ್ಟ ಸಾರಿಗೆ ನಿಗಮವು ಭರಿಸಬೇಕಾಗಿರುತ್ತದೆ.

ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶೇ.60ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ಒದಗಿಸುತ್ತಿದ್ದು, ಉಳಿದ ಶೇ.40ರಷ್ಟು ಅನುದಾನವನ್ನು ಮಾತ್ರ ರಾಜ್ಯ ಸರ್ಕಾರ ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯಡಿ ಎಲೆಕ್ಟ್ರಿಕ್ ಬಸ್ಸುಗಳಿಗೆ ಅವಶ್ಯವಿರುವ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಸಹ ಕೇಂದ್ರ ಸರ್ಕಾರವೇ ಟೆಂಡರ್ ಆಹ್ವಾನಿಸುತ್ತದೆ ಹಾಗೂ ಆಹ್ವಾನಿಸಲಾಗುವ ಟೆಂಡರ್‌ನಲ್ಲಿ ವಿಧಿಸಬಹುದಾದ ಷರತ್ತು ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಅಭಿಪ್ರಾಯ ಪಡೆದು ಸೂಕ್ತವಾದವುಗಳನ್ನು ಅಳವಡಿಸಿಕೊಂಡು ಕೇಂದ್ರ ಸರ್ಕಾರವೇ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುತ್ತದೆ.

ಭಾರತ ಸರ್ಕಾರವು ಹಣ ಪಾವತಿ ವಿಳಂಬದ ಸಂಭಾವ್ಯ ಅಪಾಯಗಳನ್ನು ಪರಿಹರಿಸಲು ಹಾಗೂ OEM/ ಆಚರಣೆದಾರರ Financial Viability ಅನ್ನು ಹೆಚ್ಚಿಸಲು, ಸಾರ್ವಜನಿಕ ಸಾರಿಗೆ ಸಂಸ್ಥೆಗಳಿಗೆ ಎಲೆಕ್ಟ್ರಿಕ್ ಬಸ್‌ಗಳ ಖರೀದಿ ಮತ್ತು ಕಾರ್ಯಾಚರಣೆಗಾಗಿ Payment Security Mechanism ವ್ಯವಸ್ಥೆಯನ್ನು ರೂಪಿಸಿದ್ದು, ಸದರಿ ವ್ಯವಸ್ಥೆಗೆ ರಾಜ್ಯ ಸರ್ಕಾರವು ಸಹ ಅನುಮೋದನೆ ನೀಡಿರುತ್ತದೆ.

ಅಲ್ಲದೇ, ಮಾರ್ಚ್ 2027ರವರೆಗೆ ಆಯ್ದ ನಗರಗಳಿಗೆ ವಿದ್ಯುತ್ ಮೂಲಸೌಕರ್ಯ ರಚನೆಗೆ 100%ರಷ್ಟು ನೆರವನ್ನು ಕೇಂದ್ರ ಸರ್ಕಾರ ಒದಗಿಸುತ್ತದೆ. ಸದರಿ ಯೋಜನೆಯಡಿ

ನಿಗಮವಾರು ಬಸ್ಸುಗಳ ಹಂಚಿಕೆ ವಿವರ ಕೆಳಕಂಡಂತಿದೆ:-

**ಕ.ರಾ.ರ.ಸಾ.ನಿಗಮ:-** PM e-bus sewa ಯೋಜನೆಯಡಿಯಲ್ಲಿ ನಿಗಮಕ್ಕೆ ಒಟ್ಟು 350 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಮಂಜೂರು ಮಾಡಿದ್ದು, ಸದರಿ ಬಸ್‌ಗಳನ್ನು ನಿಗಮದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-

| **ಜಿಲ್ಲೆ** | **ಬಸ್‌ಗಳ ಸಂಖ್ಯೆ** |
|---|---|
| ಮಂಗಳೂರು | 100 |
| ಮೈಸೂರು | 100 |
| ದಾವಣಗೆರೆ | 50 |
| ಶಿವಮೊಗ್ಗ | 50 |
| ತುಮಕೂರು | 50 |
| **ಒಟ್ಟು** | **350** |

**ಬೆಂ.ಮ.ಸಾ.ಸಂಸ್ಥೆ:-** ಕೇಂದ್ರ ಸರ್ಕಾರವು PM E-DRIVE ಯೋಜನೆ ಅಡಿಯಲ್ಲಿ ಸಂಸ್ಥೆಗೆ 4500 ಎಲೆಕ್ಟ್ರಿಕ್ ಬಸ್ಸುಗಳಿಗೆ ಮಂಜೂರಾತಿ ನೀಡಿರುತ್ತದೆ.

**ವಾ.ಕ.ರ.ಸಾ.ಸಂಸ್ಥೆ:-** PM e-bus sewa ಯೋಜನೆಯಡಿಯಲ್ಲಿ ಸಂಸ್ಥೆಗೆ ಒಟ್ಟು 200 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಮಂಜೂರು ಮಾಡಿದ್ದು, ಸದರಿ ಬಸ್‌ಗಳನ್ನು ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-

| **ಜಿಲ್ಲೆ** | **ಬಸ್‌ಗಳ ಸಂಖ್ಯೆ** |
|---|---|
| ಬೆಳಗಾವಿ | 100 |
| ಹುಬ್ಬಳ್ಳಿ-ಧಾರವಾಡ | 100 |
| **ಒಟ್ಟು** | **200** |

**ಕ.ಕ.ರ.ಸಾ.ನಿಗಮ:-** PM e-bus sewa ಯೋಜನೆಯಡಿಯಲ್ಲಿ ಸಂಸ್ಥೆಗೆ ಒಟ್ಟು 200 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಮಂಜೂರು ಮಾಡಿದ್ದು, ಸದರಿ ಬಸ್‌ಗಳನ್ನು ನಿಗಮದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-

| **ಜಿಲ್ಲೆ** | **ಬಸ್‌ಗಳ ಸಂಖ್ಯೆ** |
|---|---|
| ಕಲಬುರಗಿ | 100 |
| ಬಳ್ಳಾರಿ | 50 |
| ವಿಜಯಪುರ | 50 |
| **ಒಟ್ಟು** | **200** |

ಮೇಲ್ಕಂಡಂತೆ ವಿದ್ಯುತ್ ಚಾಲಿತ ಬಸ್‌ಗಳನ್ನು ಒದಗಿಸುವ

| | | |
|---|---|---|
| | | ಪ್ರಸ್ತಾವನೆಗೆ ಸಂಬಂಧಿಸಿದಂತೆ Convergence Energy Services Limited (CESL) ಇವರು ಕೇಂದ್ರ ಸರ್ಕಾರದ ಪರವಾಗಿ ಕ್ರೋಢೀಕೃತ ಪ್ರಮಾಣಕ್ಕೆ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |
| ಋ. | ಕಲಬುರಗಿ ನಗರ ಸಾರಿಗೆಗೆ ಎಲೆಕ್ಟ್ರಿಕ್ ಬಸ್‌ಗಳನ್ನು ನೀಡಲಾಗುವುದೇ; ಅಂತಹ ಎಷ್ಟು ಬಸ್‌ಗಳನ್ನು ನೀಡಲು ಚಿಂತನೆ ನಡೆದಿದೆ? (ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ PM e-bus sewa ಯೋಜನೆಯಡಿ ನಿಗಮದ ಕಲಬುರಗಿ ನಗರಕ್ಕೆ 100 ವಿದ್ಯುತ್ ಚಾಲಿತ ಬಸ್‌ಗಳು ಮಂಜೂರಾಗಿರುತ್ತವೆ ಸದರಿ ಬಸ್‌ಗಳನ್ನು ಒದಗಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಭಾರತ ಸರ್ಕಾರವು Convergence Energy Services Limited (CESL) ಇವರಿಂದ ಕ್ರೂಢೀಕೃತ ಪ್ರಮಾಣಕ್ಕೆ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ ಪ್ರಸ್ತುತ ಜಾರಿಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 141 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ 'ಬಿ'

ಕ.ರಾ.ರ.ಸಾ. ನಿಗಮ : ಕೇಂದ್ರ ಕಚೇರಿ : ಬೆಂಗಳೂರು

ವಿಭಾಗವಾರು ಅಂಗಡಿ ಹೋಟೆಲ್ ಇನ್ನಿತರ ಹೊರ ಆದಾಯದ ವಿವರ

**Annexure -1**

| Division | Amount (Rs. In lakh) |
|---|---|
| Bangalore Central | 142.92 |
| Bangalore South | 265.89 |
| Tumkur | 358.56 |
| Kolar | 136.37 |
| Chickballapura | 214.06 |
| Mysore Urban | 418.97 |
| Mysore Rural | 506.2 |
| Mandya | 244.84 |
| Chamarajnagar | 158.32 |
| Hassan | 769.27 |
| Chickmagaluru | 412.17 |
| mangalore | 371.21 |
| Puttur | 186.5 |
| Davanagere | 200.22 |
| Shivamogga | 335.71 |
| Chitradurga | 305.12 |
| Kempegowda Bus Station | 1682.97 |
| Central Office | 1128.16 |
| TOTAL | 7837.46 |



ile No. TD/141/TCQ/2025-Sec 1-Trans (Computer No. 1863368)

ಟಿ. ಕೆ. ರ. ನಿ. ಶಾಸ್ತ್ರಿ. 6

## ಅನುಬಂಧ-ಅ 01

ವಾ.ಕ.ರ.ಸಾ.ಸಂಸ್ಥೆಯ 2023-24 ಮತ್ತು 2024-25 ಸಾಲಿನ ಅಂಗಡಿ ಹೋಟೆಲ್ ಇನ್ನಿತರ ಹೊರ ಆದಾಯದ ವಿವರ (ವಿಭಾಗವಾರು) ಈ ಕೆಳಗಿನಂತಿರುತ್ತದೆ.

(ರೂ.ಲಕ್ಷ ಗಳಲ್ಲಿ)

| ವಿಭಾಗ | 2023-24 | | 2024-25 | |
|---|---|---|---|---|
| | ಅಂಗಡಿ ಹೋಟೆಲ್ (ವಾಣಿಜ್ಯ ಮಳಿಗೆಗಳ) ಆದಾಯ | ಇನ್ನಿತರ ಹೊರ ಆದಾಯ | ಅಂಗಡಿ ಹೋಟೆಲ್ (ವಾಣಿಜ್ಯ ಮಳಿಗೆಗಳ) ಆದಾಯ | ಇನ್ನಿತರ ಹೊರ ಆದಾಯ |
| ಹುಬ್ಬಳ್ಳಿ (ಗ್ರಾ) | 314.24 | 842.54 | 444.96 | 188.69 |
| ಬೆಳಗಾವಿ | 392.98 | 544.31 | 502.13 | 173.41 |
| ಧಾರವಾಡ | 354.88 | 330.18 | 415.81 | 74.13 |
| ಶಿರಸಿ | 331.06 | 678.99 | 390.92 | 124.24 |
| ಗದಗ | 350.02 | 878.32 | 433.63 | 132.75 |
| ಬಾಗಲಕೋಟೆ | 440.60 | 399.95 | 502.78 | 171.36 |
| ಹಾವೇರಿ | 350.13 | 878.47 | 408.62 | 102.10 |
| ಕಾಮಗಾರಿ (ಹುಬ್ಬಳ್ಳಿ) | - | - | - | 13.48 |
| ಕಾಮಗಾರಿ (ಬೆಳಗಾವಿ) | - | 11.10 | - | 2.26 |
| ಚಿಕ್ಕೋಡಿ | 289.52 | 413.64 | 355.86 | 134.05 |
| ಪ್ರಾ. ಕಾರ್ಯಾಗಾರ | - | 103.52 | - | 611.81 |
| ಹು-ಧಾ ನಗರ ಸಾರಿಗೆ | 76.18 | 65.31 | 58.81 | 65.27 |
| ಕೇಂದ್ರ ಕಛೇರಿ | | 619.50 | | 1829.07 |
| ಒಟ್ಟು | **2899.63** | **5765.83** | **3513.52** | **3622.62** |

ತಮ್ಮ ವಿಶ್ವಾಸಿ

(signature) 04/08

ಮುಖ್ಯ ಲೆಕ್ಕಾಧಿಕಾರಿಗಳು,
ವಾ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ.

(೬)

## ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ

(ರೂ.ಲಕ್ಷದಲ್ಲಿ)

| ಕ್ರ. ಸಂ | ವಿಭಾಗ | ಒಟ್ಟು ಪ್ರತಿ ತಿಂಗಳು ಆದಾಯ |
|---|---|---|
| 1 | ಕಲಬುರಗಿ-1 | 23.83 |
| 2 | ಕಲಬುರಗಿ-2 | 41.41 |
| 3 | ಬೀದರ | 36.01 |
| 4 | ಯಾದಗಿರಿ | 20.92 |
| 5 | ಬಳ್ಳಾರಿ | 23.04 |
| 6 | ರಾಯಚೂರು | 47.77 |
| 7 | ಕೊಪ್ಪಳ | 29.18 |
| 8 | ವಿಜಯಪುರ | 80.89 |
| 9 | ಹೊಸಪೇಟೆ | 25.33 |
| | **ಒಟ್ಟು** | **328.38** |

File No TD/141/TCO/2025-Sec 1-Trans (Computer No 1863368)

ಕ.ರಾ.ರ. ಸಾ. ನಿಗಮ

ಅನುಬಂಧ - [illegible]

ವಿಭಾಗದ ಅಧಿಕಾರಿಗಳು ಚಾಲಕ ಮತ್ತು ನಿರ್ವಾಹಕರಿಗೆ ತೊಂದರೆ, ಮಾನಸಿಕ ಕಿರುಕುಳ ನೀಡುತ್ತಿದ್ದಾರೆಂದು ಮೇಲಾಧಿಕಾರಿಗಳಿಗೆ ದೂರು ನೀಡಿರುವ ಪ್ರಕರಣಗಳು ಹಾಗೂ ಅದರಂತೆ ಕಾನೂನು ರೀತಿ ಕ್ರಮ ಕೈಗೊಂಡ ವಿವರ.

| ಕ್ರ.ಸಂ | ದಿನಾಂಕ | ದೂರು ನೀಡಿದವರ ವಿವರ | ದೂರಿನ ಸಂಕ್ಷಿಪ್ತ ವಿವರ | ದೂರಿನನ್ವಯ ತೆಗೆದುಕೊಂಡ ಕ್ರಮದ ವಿವರ |
|---|---|---|---|---|
| 1 | 27-06-2023 | ಶ್ರೀ.ಹೆಚ್.ವಿ. ಅನಂತಸುಬ್ಬರಾವ್ ರವರು | ಶ್ರೀಮತಿ ಶೋಭ. ಎಂ. ಎಂ, ಸಹಾಯಕ ಸಂಚಾರ ಅಧೀಕ್ಷಕಿ. ಕನಕಪುರ ಘಟಕ. ಬೆಂಗಳೂರು ದಕ್ಷಿಣ ವಿಭಾಗ ರವರು ಚಾಲನಾ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಬಗ್ಗೆ. | ಶ್ರೀ.ಮತಿ ಶೋಭ. ಎಂ.ಎಂ. ರವರಿಗೆ ರೂ.2,000/- ಗಳು ದಂಡ ವಿಧಿಸಲಾಗಿದೆ. |
| 2 | 09-12-2024 | ಕನಕಪುರ ಘಟಕ ಸಿಬ್ಬಂದಿಗಳು | ಕನಕಪುರ ಘಟಕದ ಸಹಾಯಕ ಕಾರ್ಯಾಧೀಕ್ಷಕರಾದ ಶ್ರೀ ನರಸಿಂಹರಾಜು. ಎಸ್.ವಿ ರವರು ಅವರಿಗೆ ಬೇಕಾಗಿರುವ ಸಿಬ್ಬಂದಿಗಳಿಗೆ ಅನುಕೂಲ ಮಾಡಿಕೊಟ್ಟು ಇತರೆ ಸಿಬ್ಬಂದಿಗಳಿಗೆ ಕೆಲಸದಲ್ಲಿ ಒತ್ತಡ ಹಾಕುತ್ತಾರೆಂಬ ಬಗ್ಗೆ | ಶ್ರೀ.ನರಸಿಂಹರಾಜು. ಎಸ್. ವಿ ರವರಿಗೆ ರೂ.1000/- ಗಳ ದಂಡ ವಿಧಿಸಲಾಗಿದೆ. |
| 3 | 06-02-2025 | ಶ್ರೀ.ಹೆಚ್.ವಿ. ಅನಂತಸುಬ್ಬರಾವ್ ರವರು | ಶ್ರೀಮತಿ ಶೋಭ. ಎಂ. ಎಂ., ಸಹಾಯಕ ಸಂಚಾರ ಅಧೀಕ್ಷಕಿ. ಕನಕಪುರ ಘಟಕ ರವರು ಆ ಘಟಕದ ಬಹುತೇಕ ಕಾರ್ಮಿಕರಿಗೆ ಕೆಲಸದ ವೇಳೆಯಲ್ಲಿ ತೊಂದರೆ ಕೊಡುತ್ತಿರುವ ಬಗ್ಗೆ. | ವರದಿ ಸಲ್ಲಿಸಲಾಗಿದೆ ಆರೋಪಗಳು ಸಾಭೀತಾಗಿರುವುದಿಲ್ಲ. |
| 4 | 27-02-2025 | ಸಂ.ತೋಷ್ ಕುಮಾರ್, ಚಾ/ನಿ, ಬಿ.ಸಂ:1395, ರಾಮನಾಥಪುರ ಘಟಕ | ಘಟಕದ ಸಂಚಾರ ಮೇಲ್ವಿಚಾರಕರು ಹಾಗೂ ಘಟಕ ವ್ಯವಸ್ಥಾಪಕರಾದ ಎನ್. ಎನ್. ಮಹೇಂದ್ರ ರವರು ರಜೆ ನೀಡುವ ವಿಚಾರದಲ್ಲಿ ತೊಂದರೆ ನೀಡುತ್ತಿರುವ ಬಗ್ಗೆ. | ಶಿಸ್ತು ಕ್ರಮವಾಗಿ ಶ್ರೀ. ಮಹೇಂದ್ರ. ಎನ್. ಎನ್. ಪ್ರಭಾರ ಘಟಕ ವ್ಯವಸ್ಥಾಪಕರಿಗೆ ಆರೋಪ ಪತ್ರವನ್ನು ಜಾರಿಗೊಳಿಸಲಾಗಿದೆ. |

No. TD/141/TCQ/2025-Sec 1-Trans (Computer No. 1863368)
Generated from eOffice by Shilpa M Sudi TD-SO-ASST(SMS) ASSISTANT TRANSPORTSFC on 08/08/2025 04:08 PM

ಅನುಬಂಧ - 4

## ನಿಗಮದಲ್ಲಿ ಚಾಲಕ ಮತ್ತು ನಿರ್ವಾಹಕರು ಆತ್ಮಹತ್ಯೆಗೆ ಯತ್ನಿಸಿರುವ ಪ್ರಕರಣಗಳ ವಿವರ.

| ಕ್ರ. ಸಂ | ದಿನಾಂಕ | ಆತ್ಮಹತ್ಯೆಗೆ ಪ್ರಯತ್ನಿಸಿದ ಸಿಬಂ್ಬದಿಗಳ ವಿವರ | ಆತ್ಮಹತ್ಯೆಗೆ ಕಾರಣ | ಷರಾ |
|---|---|---|---|---|
| 1 | 05-07-2023 | ಶ್ರೀ.ಹೆಚ್. ಆರ್ ಜಗದೀಶ್ ಚಾ/ನಿ. ಬಿ.ಸಂ:1678 ನಾಗಮಂಗಲ ಘಟಕ, ಮಂಡ್ಯ ವಿಭಾಗ. | ನಾಗಮಂಗಲ ಘಟಕದಿಂದ ಮದ್ದೂರು ಘಟಕಕ್ಕೆ ಆಡಳಿತಾತ್ಮಕ ವರ್ಗಾವಣೆ ಮಾಡಿದ ಹಿನ್ನೆಲೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿರುತ್ತಾರೆ | |
| 2 | 18-04-2025 | ಶ್ರೀ. ಮಧು.ಎಂ.ವಿ. ಚಾಲಕ, ಬಿ.ಸಂ:6024 ಕಡೂರು ಘಟಕ, ಚಿಕ್ಕಮಗಳೂರು ವಿಭಾಗ. | ಶ್ರೀ. ಮಧು ಎಂ.ವಿ., ಚಾಲಕ, ಬಿ.ಸಂ:6025, ಕಡೂರು ಘಟಕ ರವರು ವಾರದ ದಿನ ಕರ್ತವ್ಯ ನಿರ್ವಹಿಸಿ, ಮಾರನೇ ದಿನದ ಕರ್ತವ್ಯಕ್ಕೆ ಸಹಿ ಮಾಡಿದ್ದರೂ ಸಹ ದಿ:17-04-2025 ರಂದು ಕರ್ತವ್ಯಕ್ಕೆ ಬಾರದೆ ಇದ್ದಾಗ್ಯೂ ಸಹ ಬದಲಿ ವಾರದ ರಜೆ ಹಾಕಲಿಲ್ಲವೆಂಬ ಕಾರಣಕ್ಕೆ ದಿ:18-04-2025 ರಂದು ಘಟಕದ ಸಿಬಂ್ಬದಿ ವಿಶ್ರಾಂತಿ ಗೃಹಕ್ಕೆ ತೆರಳಿ ಮುಂಚಿತವಾಗಿಯೇ ತಂದಿದ್ದ ಕೀಟನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುತ್ತಾರೆ | |
| 3 | 07-07-2025 | ಶ್ರೀ. ಹರೀಶ್, ಚಾ/ನಿ, ಬಿ.ಸಂ:1254 ಬೇಲೂರು ಘಟಕ, ಚಿಕ್ಕಮಗಳೂರು ಘಟಕ. | ಶ್ರೀ. ಹರೀಶ್, ಚಾ/ನಿ, ಬಿ.ಸಂ:1254 ರವರು ದಿ:03-07-2025 ರಂದು 6ಎಬಿಯಲ್ಲಿ ಕರ್ತವ್ಯ ನಿರ್ವಹಿಸಿ, ಸದರಿ ಮಾರ್ಗದ 56 ಕಿ.ಮೀ. ರದ್ಧತಿ ಮಾಡಿಕೊಂಡು ಘಟಕಕ್ಕೆ ಬಂದಿದ್ದು, ಸದರಿ ಕಿ.ಮೀ.ಗಳನ್ನು ಪೂರ್ಣಗೊಳಿಸುವಂತೆ ಘಟಕ ವ್ಯವಸ್ಥಾಪಕರು ತಿಳಿಸಿದರೂ ಸಹ ಸದರಿಯವರು ಪೂರ್ತಿ ಕಿ.ಮೀ. ಪೂರ್ಣಗೊಳಿಸದೆ, ಸ್ಥಳೀಯ ಪತ್ರಿಕಾ ಪ್ರತಿನಿಧಿಗಳನ್ನು ಘಟಕಕ್ಕೆ ಕರೆತಂದು ಸದರಿ ಮಾರ್ಗದ ಆದಾಯವನ್ನು ಸಂದಾಯ ಮಾಡಲು ಘಟಕ ವ್ಯವಸ್ಥಾಪಕರಿಗೆ ಒತ್ತಡ ಹೇರಿದ್ದು, ಸದರಿ ಘಟನೆಯ ಬಗ್ಗೆ ಘಟಕ ವ್ಯವಸ್ಥಾಪಕರು ವರದಿಯನ್ನು ತಯಾರಿಸುತ್ತಿದ್ದ ಮಾಹಿತಿಯನ್ನು ತಿಳಿದುಕೊಂಡು ದಿ07-07-2025 ರಂದು ಸಮಯ ಸುಮಾರು 07.30 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿದ್ದು, ಸದರಿಯವರು ಘಟಕದ ಮಾರ್ಗ ಸಂಖ್ಯೆ:4/5 ಕ್ಕೆ ಡ್ಯೂಟಿ ರೋಟಾದಲ್ಲಿ ನಿರ್ವಾಹಕರಾಗಿ ಆಯ್ಕೆ ಮಾಡಿಕೊಂಡಿದ್ದರೂ ಸಹ ನಿಗಧಿತ ಮಾರ್ಗದ ಕರ್ತವ್ಯಕ್ಕೆ ಹೋಗಲು ಇಷ್ಟವಿಲ್ಲ, ತನಗೆ ರಿಟರ್ನ್ ಅನುಸೂಚಿ ಕೊಡಲು ಘಟಕ ವ್ಯವಸ್ಥಾಪಕರು ಮತ್ತು ಸಂಚಾರ ಮೇಲ್ವಿಚಾರಕರಿಗೆ ಕೋರಿದ ಸಂದರ್ಭದಲ್ಲಿ ನಿಮಗೆ ನಿಯೋಜಿತ ಮಾರ್ಗದಲ್ಲೇ ಕರ್ತವ್ಯ ನಿರ್ವಹಿಸಲು ಘಟಕ ವ್ಯವಸ್ಥಾಪಕರು ಸೂಚಿಸಿದರು ಎಂಬ ಕಾರಣಕ್ಕೆ ಸಿಬಂ್ಬದಿ ವಿಶ್ರಾಂತಿ ಗೃಹಕ್ಕೆ ಹೋಗಿ ಮುಂಚಿತವಾಗಿಯೇ ತಮ್ಮೊಂದಿಗೆ ತಂದಿದ್ದ ಕೀಟನಾಶಕ ಸೇವನೆ ಮಾಡಿ, ಆತ್ಮಹತ್ಯೆಗೆ ಯತ್ನಿಸಿರುತ್ತಾರೆ | |
| 4 | 12-06-2023 | ಶ್ರೀ.ರಾಘವೇಂದ್ರ.ಜೆ.ಎಂ. ಚಾ/ನಿ. ಬಿ.ಸಂ:1370 ಚಿತ್ರದುರ್ಗ ಘಟಕ, ಚಿತ್ರದುರ್ಗ ವಿಭಾಗ. | ಕೌಟುಂಬಿಕ ಸಮಸ್ಯೆಯ ಹಿನ್ನೆಲೆ | ಆತ್ಮಹತ್ಯೆಗೆ ಪ್ರಯತ್ನಿಸಿದ ಸಂದರ್ಭದಲ್ಲಿ ಮೃತಪಟ್ಟಿರುತ್ತಾರೆ. |
| 5 | 29-08-2023 | ಶ್ರೀ. ಸಿ.ಡಿ.ಪ್ರಸನ್ನ ಕುಮಾರ ಚಾ/ನಿ. ಬಿ.ಸಂ:4336/14569 ಹೊಸದುರ್ಗ ಘಟಕ, ಚಿತ್ರದುರ್ಗ ವಿಭಾಗ. | ಕೌಟುಂಬಿಕ ಸಮಸ್ಯೆಯ ಹಿನ್ನೆಲೆ | ಆತ್ಮಹತ್ಯೆಗೆ ಪ್ರಯತ್ನಿಸಿದ ಸಂದರ್ಭದಲ್ಲಿ ಮೃತಪಟ್ಟಿರುತ್ತಾರೆ. |
| 6 | 09-07-2025 | ಪರಮೇಶ್ವರಪ್ಪ, ಚಾ/ನಿ. ಬಿ.ಸಂ:1440 ಚಳ್ಳಕೆರೆ ಘಟಕ, ಚಿತ್ರದುರ್ಗ ವಿಭಾಗ. | ಕೌಟುಂಬಿಕ ಸಮಸ್ಯೆಯ ಹಿನ್ನೆಲೆ | ಆತ್ಮಹತ್ಯೆಗೆ ಪ್ರಯತ್ನಿಸಿದ ಸಂದರ್ಭದಲ್ಲಿ ಮೃತಪಟ್ಟಿರುತ್ತಾರೆ. |

ಅನುಬಂಧ-3

# ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ

## (ಭದ್ರತಾ ಮತ್ತು ಜಾಗೃತ ಇಲಾಖೆ)

| ಕ್ರ.ಸಂ | ಜಿಲ್ಲೆ | ರಾಜ್ಯದ ಎಲ್ಲಾ ನಿಗಮದ ಡಿಪೋ ಅಥವಾ ವಿಭಾಗದ ಅಧಿಕಾರಿಗಳು ಚಾಲಕ ಮತ್ತು ನಿರ್ವಾಹಕರಿಗೆ ತೊಂದರೆ/ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಮೇಲಾಧಿಕಾರಿಗಳಿಗೆ ದೂರು ನೀಡಿರುವ ಪ್ರಕರಣಗಳು | | | ಕಾನೂನು ರೀತಿ ಕ್ರಮ ಕೈಗೊಂಡ ಪ್ರಕರಣಗಳು | | | ಚಾಲಕ ಮತ್ತು ನಿರ್ವಾಹಕರು ಆತ್ಮಹತ್ಯೆಗೆ ಯತ್ನಿಸಿರುವ ಪ್ರಕರಣಗಳು | | |
|---|---|---|---|---|---|---|---|---|---|---|
| | | 2023-24 | 2024-25 | ಒಟ್ಟು | 2023-24 | 2024-25 | ಒಟ್ಟು | 2023-24 | 2024-25 | ಒಟ್ಟು |
| 1 | ಧಾರವಾಡ | 01 | 01 | 02 | 01 | 01 | 02 | - | - | - |
| 2 | ಬೆಳಗಾವಿ | 08 | 09 | 17 | 09 | 08 | 17 | - | - | - |
| 3 | ಬಾಗಲಕೋಟ | 02 | 01 | 03 | 02 | 01 | 03 | - | - | - |
| 4 | ಗದಗ | - | - | - | - | - | - | - | - | - |
| 5 | ಹಾವೇರಿ | 02 | 02 | 04 | 02 | 02 | 04 | - | - | - |
| 6 | ಉಕ | - | - | - | - | - | - | - | - | - |
| ಒಟ್ಟು | | 13 | 13 | 26 | 14 | 12 | 26 | | - | - |

ಭದ್ರತಾ ಮತ್ತು ಜಾಗೃತಾಧಿಕಾರಿ
ವಾ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ

File No. TD/141/TCQ/2025-Sec 1-Trans (Computer No. 1863368)

ಅನುಬಂಧ-ಅ

2022-23 ರಿಂದ 2024-25 ನೇ ಸಾಲಿನವರೆಗೆ ಕಕರಸಾನಿಗಮದಲ್ಲಿ ಚಾಲಕ ಮತ್ತು ನಿರ್ವಾಹಕರು ತಮ್ಮ ಮೇಲಾಧಿಕಾರಿಗಳ ಮೇಲೆ ಸಲ್ಲಿಸಿದ ದೂರುಗಳು ಹಾಗೂ ಅದರ ಕುರಿತು ತೆಗೆದುಕೊಂಡ ಕ್ರಮದ ವಿವರ

| ಕ್ರ.ಸಂ | ವಿಭಾಗ | ಸ್ವೀಕರಿಸಿದ ದೂರುಗಳ ಸಂಖ್ಯೆ | ಅಗತ್ಯ ಕ್ರಮಕ್ಕಾಗಿ ರವಾನಿಸಿದ ದೂರುಗಳ ಸಂಖ್ಯೆ | ಸಾಬಿತಾಗದೇ ಕಡತೀಕರಿಸಿದ ದೂರುಗಳ ಸಂಖ್ಯೆ | ವಿಚಾರಣೆ ಹಂತದಲ್ಲಿರುವ ದೂರುಗಳ ಸಂಖ್ಯೆ |
|---|---|---|---|---|---|
| 01 | ಕಲಬುರಗಿ-1 | 07 | 01 | 03 | 03 |
| 02 | ಕಲಬುರಗಿ-2 | 01 | 01 | - | - |
| 03 | ಬೀದರ | 03 | 02 | - | 01 |
| 04 | ಯಾದಗಿರಿ | - | - | - | - |
| 05 | ಬಳ್ಳಾರಿ | 02 | - | 02 | - |
| 06 | ರಾಯಚೂರು | 08 | 01 | 07 | - |
| 07 | ಕೊಪ್ಪಳ | 02 | 01 | 01 | - |
| 08 | ಹೊಸಪೇಟೆ | 02 | - | 02 | - |
| 09 | ವಿಜಯಪುರ | 02 | - | 02 | - |
| | ಒಟ್ಟು | 27 | 06 | 17 | 04 |

ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ



ile No. TD/141/TCQ/2025-Sec 1-Trans (Computer No. 1863368)
Scanned with OKEN Scanner

::ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಛೇರಿ ಕಲಬುರಗಿ::

ಆತ್ಮ ಹತ್ಯೆಗೆ ಯತ್ನಿಸಿದ ಸಿಬ್ಬಂದಿಗಳ ವಿವರ.

| ಕ್ರ. ಸಂ | ವಿಭಾಗ | ಹೆಸರು | ಹುದ್ದೆ& ಬಿಲ್ಲೆ ಸಂಖ್ಯೆ | ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ಆತ್ಮಹತ್ಯೆಗೆ ಪ್ರಯತ್ನ ಪಟ್ಟಿರುವ ಕಾರಣ |
|---|---|---|---|---|---|
| 01 | ಕಲಬುರಗಿ-2 | ಶ್ರೀ ಬೀರಪ್ಪ | ಚಾಲಕ ಕಂ-ನಿರ್ವಾಹಕ ಸಂ-832 | ಕಲಬುರಗಿ ಘಟಕ-02 | ಪೊಲೀಸ್ ಪ್ರಥಮ ವರ್ತಮಾನ ವರದಿ ಸಂ-0135/2023 ದಿ-21-07-23 ರಂತೆ ಘಟಕ ವ್ಯವಸ್ಥಾಪಕರು ಕಲಬುರಗಿ ಘಟಕ-02 ರವರು ಕರ್ತವ್ಯಕ್ಕೆ ನಿಯೋಜನೆ ಮಾಡದೇ ಇರುವುದಕ್ಕೆ ಹಾಗೂ ಬೆದರಿಕೆ ಹಾಕಿರುವ ಹಿನ್ನಲೆಯಲ್ಲಿ ಆತ್ಮಹತ್ಯೆಗೆ ಯತ್ನ. |
| 02 | ಬೀದರ | ಶ್ರೀ ರಾಮಕೃಷ್ಣ | ಚಾಲಕ-ಕಂ-ನಿರ್ವಾಹಕ ಸಂ-160 | ಭಾಲ್ಕಿ ಘಟಕ | ಪೊಲೀಸ್ ಪ್ರಥಮ ವರ್ತಮಾನ ವರದಿ ಸಂ-0077/2023 ದಿನಾಂಕ 24-05-23 ರಂತೆ ಈ ಹಿಂದೆ ದಿನಾಂಕ 22-05-2023 ರಂದು ಕರ್ತವ್ಯದ ಮೇಲಿರುವಾಗ ಓರ್ವ ಮಹಿಳೆಗೆ ರೂ.235/- ಬೆಲೆಯ ಟಿಕೇಟ್ ವಿತರಿಸದೇ ಇರುವ ಬಗ್ಗೆ ತನಿಖಾಧಿಕಾರಿಗಳು ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆತ್ಮಹತ್ಯೆಗೆ ಯತ್ನ. |

ಕರ್ನಾಟಕ ವಿಧಾನ ಪರಿಷತ್ತು

ಶ್ರೀಸುನೀಲ್ ವಲ್ಯಾಪುರ್, ಮಾನ್ಯ ವಿಧಾನ ಪರಿಷತ್ ಸದಸ್ಯರು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ. 40 (388)

ಕ.ರಾ.ರ.ಸಾ. ನಿಗಮದಲ್ಲಿ ಅಪಘಾತಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಮತ್ತು ಆಕಸ್ಮಿಕ ಬೆಂಕಿ ಕಾಣಿಸಿದಾಗ ಅನುಸರಿಸಬೇಕಾದ ಕ್ರಮಗಳು ಈ ಕೆಳಕಂಡಂತಿದೆ.

1. ಚಾಲಕರನ್ನು ನೇಮಕ ಮಾಡಿಕೊಳ್ಳುವ ಕನಿಷ್ಠ ವಯೋಮಿತಿಯನ್ನು 21 ರಿಂದ 24 ವರ್ಷಕ್ಕೆ ಏರಿಸಲಾಗಿದೆ.
2. ಉತ್ತಮ ಚಾಲನೆಯಿಲ್ಲದ ಚಾಲಕರನ್ನು ಹಾಗೂ ಅಪಘಾತ ಮಾಡಿರುವ ಚಾಲಕರನ್ನು ಗುರುತಿಸಿ ಹೆಚ್ಚಿನ ತರಬೇತಿಗಾಗಿ ಚಾಲಕರನ್ನು ತರಬೇತಿ ಕೇಂದ್ರಕ್ಕೆನಿಯೋಜಿಸಲಾಗುತ್ತಿದೆ.
3. ಎಲ್ಲಾ ಸಾರಿಗೆ ನಿಗಮಗಳ ಸಮೂಹದ ಸಹಭಾಗಿತ್ವದೊಂದಿಗೆ ಮದ್ಯಪಾನ ಸೇವನೆ ಅಭ್ಯಾಸವಿರುವ ಚಾಲಕರನ್ನು ಗುರುತಿಸಿ ಮದ್ಯಪಾನ ವಿಮುಕ್ತಿ ಕೇಂದ್ರದಲ್ಲಿರುವ ಕಾರ್ಯಕ್ರಮಕ್ಕೆ ಒಳಪಡಿಸಿ, ಮದ್ಯಪಾನ ಸೇವನೆ ಚಟ ತಪ್ಪಿಸಲು ಪ್ರಯತ್ನಿಸಲಾಗುತ್ತಿದೆ.
4. ಎರಡು ವರ್ಷಗಳಿಗೊಮ್ಮೆ 40 ವರ್ಷಕ್ಕಿಂತ ಹೆಚ್ಚಿನ ವಯಸ್ಸಾದ ಚಾಲಕರಿಗೆ ಕಡ್ಡಾಯವಾಗಿ ಕಣ್ಣಿನ ತಪಾಸಣೆಯನ್ನು ಮಾಡಲಾಗುತ್ತಿದೆ.
5. ತಡರಾತ್ರಿ ಮತ್ತು ಬೆಳಗಿನ ಜಾವದಲ್ಲಿ ಆಗಿಂದಾಗ್ಗೆ ಚಾಲಕರುಗಳು ಮದ್ಯಪಾನ ಮಾಡದೆ ಇರುವ ಬಗ್ಗೆ ಉಸಿರು ತಪಾಸಣೆಗೆ ಒಳಪಡಿಸಲಾಗುವುದು. ಇದರಿಂದಾಗಿ ಚಾಲಕರುಗಳಲ್ಲಿ ಮದ್ಯಪಾನದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
6. ನಿಗಮದ ವಾಹನಗಳು ಅಪಘಾತಕ್ಕೀಡಾಗುವುದನ್ನು ತಡೆಗಟ್ಟಲು ಆಯಾ ಮಾದರಿಗನುಗುಣವಾಗಿ ವೇಗ ಮಿತಿಯನ್ನು ಅಳವಡಿಸಿಕೊಂಡು ಆಗಾಗ್ಗೆ ಮಿತಿಯಲ್ಲಿರುವುದನ್ನು ಖಾತ್ರಿಪಡಿಸಿಕೊಳ್ಳಲಾಗುತ್ತಿದೆ.
7. ಹೊಸದಾಗಿ ನೇಮಕಗೊಂಡ ಚಾಲಕರನ್ನು ಅನುಸೂಚಿ ಸೇವೆಗೆ ಕಳುಹಿಸುವುದಕ್ಕಿಂತ ಮುಂಚೆ ಸುರಕ್ಷತಾ ಚಾಲನಾ ಸಂಬಂಧಿತ ಅವಶ್ಯಕ ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ.
8. ವಿಭಾಗದ ವ್ಯಾಪ್ತಿಗೆ ಬರುವ ಹೆಚ್ಚಿನ ಅಪಘಾತಗಳು ಘಟಿಸುವ ವಲಯಗಳನ್ನು ಗುರುತಿಸಿ, ಆ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಹಾಕಿಸುವುದಲ್ಲದೆ, ಘಟಕಗಳಲ್ಲೂ ಸಹ ಪ್ರದರ್ಶಿಸಿ ಎಲ್ಲಾ ಚಾಲಕರ ಗಮನಕ್ಕೆ ತಂದು ತಿಳುವಳಿಕೆ ನೀಡಲಾಗುತ್ತಿದೆ.
9. ವಾಹನ ಚಾಲಕರುಗಳಿಗೆ ಮುನ್ನೆಚ್ಚರಿಕೆ ಕುರಿತು ಅರಿವು ಮೂಡಿಸುವ ಸಲುವಾಗಿ ಪ್ರತಿವರ್ಷವೂ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಮತ್ತು ಮಾಸಾಚರಣೆಯನ್ನು ಆಚರಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಅಪಘಾತದಿಂದ ಉಂಟಾಗುವ ಸಾವು-ನೋವುಗಳ ಬಗ್ಗೆ ಅರಿವು ಮೂಡಿಸಲು ಕಾರ್ಯಾಗಾರವನ್ನು ಆಯೋಜಿಸಲಾಗುತ್ತಿದೆ.
10. ಚಾಲನಾ ಸಿಬ್ಬಂದಿಗಳಿಗೆ ಪುನಶ್ಚೇತನ ಶಿಬಿರಗಳನ್ನು ಏರ್ಪಡಿಸಿ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
11. ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಬಸ್ ನಿಲ್ದಾಣಗಳ ಹೊರ ಹೋಗುವ ಮತ್ತು ಒಳಬರುವ ದ್ವಾರಗಳಲ್ಲಿ ರಸ್ತೆ ಉಬ್ಬುಗಳನ್ನು ಹಾಕಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
12. ಸಂಚಾರ ನಿಯಮಗಳನ್ನು ತಪ್ಪದೇ ಪಾಲಿಸುವಂತೆ ಹಾಗೂ ಸುರಕ್ಷಿತ ಚಾಲನೆಗೆ ನಿಗಮದ ತರಬೇತಿ ಕೇಂದ್ರಗಳಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು (ವಿಡಿಯೋಕ್ಲಿಪ್) ತೋರಿಸಲು ವ್ಯವಸ್ಥೆ ಮಾಡಲಾಗಿದೆ.
13. ರಾತ್ರಿ ಸಾರಿಗೆಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕರಿಗೆ ಪ್ಲಾಸ್ಕನ್ನು ನೀಡಿದ್ದು, ಕಾಫಿ/ಚಹಾ ಸೇವನೆಯಿಂದ ನಿದ್ರೆ ಮಂಪರು ತಡೆಯಬಹುದಾಗಿದೆ.
14. ಅಪಘಾತ ವಲಯಗಳಲ್ಲಿ ರಾತ್ರಿ ಸಮಯದಲ್ಲಿ ಲೈನ್ ಚೆಕ್ಕಿಂಗ್ ತಂಡಗಳಿಂದ ವಾಹನಗಳನ್ನು ಪಾರ್ಕಿಂಗ್ ಮಾಡಿಸಿ, ಅವರಿಗೆ ಅಪಘಾತಗಳ ಬಗ್ಗೆ ಹಾಗೂ ಸುರಕ್ಷಿತವಾಗಿ ಚಾಲನೆ ಮಾಡುವ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
15. ಪ್ರಸ್ತುತ ಪ್ರಥಮ ಹಂತರದಲ್ಲಿ 300 ಸಾಮಾನ್ಯ/ರಾತ್ರಿ ವೇಳೆ ಕಾರ್ಯಾಚರಣೆಯಾಗುವ ವಾಹನಗಳಲ್ಲಿ Driver drowsiness alert system ಗಳನ್ನು ಅಳವಡಿಸುವ ಪ್ರಾಯೋಗಿಕ ಕಾರ್ಯ ಪ್ರಗತಿಯಲ್ಲಿರುತ್ತದೆ.

16. ನಿಗಮಕ್ಕೆ ಹೊಸದಾಗಿ ಸೇರ್ಪಡೆಗೊಂಡಿರುವ 1138 ವಾಹನಗಳಲ್ಲಿ front and rear dash cam ಅಳವಡಿಕೆಯಲ್ಲಿದ್ದು ಇದರಿಂದ ಅಪಘಾತವುಂಟಾಗಲು ನಿಖರ ಕಾರಣ ತಿಳಿದುಕೊಂಡು ಅಪಘಾತ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ಅಗ್ನಿದುರಂತ/ಅವಗಡಗಳು ಸಂಭವಿಸದಂತೆ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.**

1. ವಾಹನದ ತುರ್ತು ನಿರ್ಗಮನದ ಬಾಗಿಲು (Emergency Exit) ಎಲ್ಲಿದೆ ಎಂಬ ಬಗ್ಗೆ ಪ್ರಯಾಣಿಕರಿಗೆ ಸೂಕ್ತ ತಿಳುವಳಿಕೆಯನ್ನು ಸ್ಥಳೀಯ ಭಾಷೆಯಲ್ಲಿ ಹಾಗೂ ಅಂತರ ರಾಜ್ಯದಲ್ಲಿ ಕಾರ್ಯಾಚರಣೆಯಾಗುವ ಮಾರ್ಗಗಳಲ್ಲಿ ಆಂಗ್ಲಬಾಷೆಯಲ್ಲಿ ಸಹ ತಿಳಿಸುವಂತೆ ಎಲ್ಲಾ ನಿರ್ವಾಹಕರಿಗೆ ಸೂಚನೆ ನೀಡಲಾಗಿದೆ.
2. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕರ ಗಮನಕ್ಕೆ ಬರುವಂತೆ ಬ್ಯಾನರ್‌ಗಳ ಮೂಲಕ ಸ್ಫೋಟಕ ಮತ್ತು ಪ್ರತಿಬಂಧಕ ವಸ್ತುಗಳನ್ನು ಸಾಗಿಸಲಾಗುವುದಿಲ್ಲ ಎಂಬ ಬಗ್ಗೆ ಹಾಗೂ ತುರ್ತು ಸಂದರ್ಭದಲ್ಲಿ ತುರ್ತು ನಿರ್ಗಮನದ್ವಾರವನ್ನು (Emergency Exit) ಉಪಯೋಗಿಸುವಂತೆ ಸದರಿ ಬ್ಯಾನರ್‌ನಲ್ಲಿ ಬರೆಸಲಾಗಿದೆ.
3. ಬಸ್ ನಿಲ್ದಾಣಗಳಲ್ಲಿ ಧ್ವನಿವರ್ಧಕ ಮುಖಾಂತರ ಸಾರ್ವಜನಿಕರ ಗಮನಕ್ಕೆ ಬರುವಂತೆ ತುರ್ತು ಸಂದರ್ಭದಲ್ಲಿ ಬಸ್ಸಿನಲ್ಲಿರುವ ತುರ್ತು ನಿರ್ಗಮನ ದ್ವಾರವನ್ನು ಬಳಕೆ ಮಾಡಲು ತಿಳಿಸಲಾಗಿದೆ.
4. ಎಲ್ಲಾ ವಾಹನಗಳ ತುರ್ತು ನಿರ್ಗಮನದ ದ್ವಾರದ ಚಿಲಕ ಇತ್ಯಾದಿಗಳು ಸರಿಯಾಗಿದೆಯೇ ಹಾಗೂ ಸುಲಭವಾಗಿ ತೆಗೆಯಬಹುದೇ ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ.
5. ಪ್ರತಿ ವಾಹನ ಘಟಕಕ್ಕೆ ಬಂದಾಗ Defect Slip ನ್ನು ಪರಿಶೀಲಿಸಿ ಪ್ರಮುಖವಾಗಿ ಇಂಧನ ಸೋರುವಿಕೆ, ಬ್ಯಾಟರಿಕನೆಕ್ಷನ್, ಕೇಬಲ್ಕನೆಕ್ಷನ್ ಇತ್ಯಾದಿ ಎಲ್ಲಾ ಎಲೆಕ್ಟ್ರಿಕಲ್ಸಿಸ್ಟಮ್ಸು ಸ್ಥಿತಿಯಲ್ಲಿದೆ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಲಾಗುತ್ತಿದೆ.
6. ನಿಗಮದ ವಾಹನಗಳಿಗೆ ಕಿಡಿಗೇಡಿಗಳು (Miscreants) ಹಾನಿ/ವಿಧ್ವಂಸಕ ಕೃತ್ಯ ಮಾಡುವ ಸಂಭವ ಇರುವುದರಿಂದ ಕರ್ತವ್ಯನಿರತ ಚಾಲನಾ ಸಿಬ್ಬಂದಿಗಳು ಮಾರ್ಗದಲ್ಲಿ ಕಾರ್ಯಾಚರಣೆಯಲ್ಲಿರುವಾಗ ವಾಹನಗಳ ಸುರಕ್ಷತೆ ಬಗ್ಗೆ, ಬಸ್ಸಿನಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರ ಸುರಕ್ಷತೆ ಬಗ್ಗೆ ಹಾಗೂ ಪ್ರಯಾಣಿಕರು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗುವ ಲಗ್ಗೇಜ್‌ನ ಬಗ್ಗೆಯು ಸಹ ಹೆಚ್ಚಿನ ನಿಗಾ/ಎಚ್ಚರವಹಿಸುವಂತೆ ತಿಳುವಳಿಕೆ ನೀಡಲಾಗಿದೆ.
7. ವಿಭಾಗಮಟ್ಟದ ಅಧಿಕಾರಿಗಳು ಘಟಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಚಾಲನಾ ಸಿಬ್ಬಂದಿಗಳನ್ನು ಉದ್ದೇಶಿಸಿ ಅಪಘಾತಗಳ ಬಗ್ಗೆ ಹಾಗೂ ಬಸ್ಸಿನಲ್ಲಿರುವ ತುರ್ತು ನಿರ್ಗಮನ ದ್ವಾರದ ಬಳಕೆ ಮಾಡಿಕೊಳ್ಳುವ ಬಗ್ಗೆ ಮತ್ತು ಸುರಕ್ಷತಾ ಚಾಲನೆ ಬಗ್ಗೆ ತಿಳುವಳಿಕೆ ನೀಡಲಾಗಿದೆ.
8. ವಾಹನಗಳ ದೈನಂದಿನ, ವಾರದ, ಡಾಕಿಂಗ್ ನಿರ್ವಹಣೆಗಳನ್ನು ಹಾಗೂ ದೋಷ ಪಟ್ಟಿಯಲ್ಲಿ ನಮೂದಿಸಲಾಗುವ ದೋಷಗಳನ್ನು ಆಯಾ ದಿನದಂದೇ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಿ ಸುಸ್ಥಿತಿಯಲ್ಲಿರುವ ವಾಹನಗಳನ್ನು ಕಾರ್ಯಾಚರಣೆಗೆ ನೀಡಲಾಗುತ್ತಿದೆ.
9. ಆಕಸ್ಮಿಕ ಬೆಂಕಿ ಅವಘಡಗಳನ್ನು ತಡೆಗಟ್ಟುವ ನಲುವಾಗಿ ನಿಗಮದ ಎಲ್ಲಾ ವಾಹನಗಳಲ್ಲಿ ಬೆಂಕಿ ನಂದಕಗಳನ್ನು ನೀಡುತ್ತಿದ್ದು ಕಡ್ಡಾಯವಾಗಿ ಇರುವುದನ್ನು ಖಚಿತ ಪಡಿಸಿಕೊಂಡು ಕಾರ್ಯಚರಣೆ ಮಾಡಲಾಗುತ್ತಿದೆ ಹಾಗೂ ಇದನ್ನು ಉಪಯೋಗಿಸುವ ಬಗ್ಗೆ ಚಾಲನಾ ಸಿಬ್ಬಂದಿಗೆ ತಿಳುವಳಿಕೆ ನೀಡಲಾಗಿದೆ.
10. ನೂತನವಾಗಿ ನಿಗಮಕ್ಕೆ ಸೇರ್ಪಡೆಗೊಂಡ ವಾಹನಗಳಲ್ಲಿ Fire detection and Alaraming system, Fire detection and Supression system, Fire detection and protection system ಗಳನ್ನು ಅಳವಡಿಸಲಾಗಿರುತ್ತದೆ
11. ವಾಹನಗಳಲ್ಲಿ ವೈರಿಂಗ್ ಹಾರ್ನೆಸ್ ಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು short circuit ಆಗುವುದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮದ ಕುರಿತು ಅನೇಕ ಸುತ್ತೋಲೆಗಳನ್ನು ಹೊರಡಿಸಿ ಅದರನ್ವಯ ಕ್ರಮ ಕೈಗೊಂಡು ವಾಹನಗಳು ಅಗ್ನಿ ಅವಘಡಕ್ಕೀಡಾಗುವುದನ್ನು ತಡೆಗಟ್ಟಿ ಸುಸ್ಥಿತಿಯ ವಾಹನಗಳನ್ನು ಕಾರ್ಯಾಚರಣೆ ಗೊಳಿಸಲಾಗುತ್ತಿದೆ

-**-